ದಿನಾಂಕಃ 22.07.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಿಪಿ7ರಲ್ಲಿ ನಾನು ಆರೋಪಿಯವರಿಗೆ ಹಣ ನೀಡಿರುವ ಬಗ್ಗೆನಮೂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವ ದಿನಾಂಕದಂದುಆರೋಪಿಯವರಿಗೆ ಹಣ ನೀಡಿರುತ್ತೇನೆ ಗೊತ್ತಿಲ್ಲ ಆದರೆ ಪೆಬ್ರವರಿ 2016ರಂದು ಹಣ ಕೊಟ್ಟಿರುತ್ತೇನೆ. ನಿಪಿ7ರಲ್ಲಿ ಆ ಸಮಯದಲ್ಲಿ ನನ್ನ ಬಳಿ ಹಣವಿತ್ತು ಎನ್ನುವ ಬಗ್ಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ6ರಲ್ಲಿ ಪೆಬ್ರವರಿ ತಿಂಗಳಲ್ಲಿ ನಾನು ಹಣ ಡ್ರಾ ಮಾಡಿರುವ ಬಗ್ಗೆ ಇರುವುದಿಲ್ಲ. ಸಾಕ್ಷಿಯು ಅದರ ಹಿಂದಿನ 2-3 ತಿಂಗಳಿಂದ ಹಣವನ್ನು ಡ್ರಾ ಮಾಡಿರುವ ಬಗ್ಗೆ ನಿಪಿ6ರಲ್ಲಿ ತೋರಿಸಲಾಗಿದೆ ಎನ್ನುತ್ತಾರೆ. ಡಿಸೆಂಬರ್ 2015ರಿಂದ ಪೆಬ್ರವರಿ 2016ರವರೆಗೆ ನನ್ನ ಬ್ಯಾಂಕ್ ಖಾತೆಯಿಂದ ಹಣ ಡ್ರಾ ಮಾಡಿರುತ್ತೇನೆ. ಸದರಿ ಹಣವನ್ನು ಆರೋಪಿಯವರಿಗೆ ನೀಡುವ ಸಲುವಾಗಿ ನಾನು ನನ್ನ ಬ್ಯಾಂಕ್ ಖಾತೆಯಿಂದ ಡ್ರಾ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಿಪಿ8ರಲ್ಲಿ ಆರೋಪಿಯವರಿಗೆ ಹಣ ನೀಡಿರುವ ಬಗ್ಗೆ ತೋರಿಸಿರುವ ಬಗ್ಗೆ ನನಗೆ ಹೇಳಲು ಆಗುವುದಿಲ್ಲ ಅದನ್ನು ನಮ್ಮ ಕಂಪನಿಯವರು ನನಗೆ ಕೊಟ್ಟಿರುತ್ತಾರೆ. ನಾನು ಆರೋಪಿಯವರಿಗೆ ಹಣವನ್ನು ಕೊಟ್ಟಿರದ ಕಾರಣ ಅದರ ಬಗ್ಗೆ ನಿಪಿ8ರಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಕಂಪನಿಯಲ್ಲಿ ಚಿದಾನಂದ್ ಚೌಹಾನ್ ಎನ್ನುವವರು ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2014ರಲ್ಲಿ ಆರೋಪಿಯವರು ಚಿದಾನಂದ್ ಚೌಹಾನ್‌ರವರಿಗೆ ವಿವಾದಿತ ಚೆಕ್ಕನ್ನು ನೀಡಿದ್ದು ಅದರಂತೆ ಅವರಿಬ್ಬರ ನಡುವೆ ಕರಾರು ಆಗಿತ್ತು ಎಂದರೆ ಸರಿಯಲ್ಲ. ಚಿದಾನಂದ್ ಚೌಹಾನ್‌ರವರಿಗೆ ನೀಡಿದ ವಿವಾದಿತ ಚೆಕ್ಕನ್ನು ನಾನು ದುರುಪಯೋಗಪಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ.

ನಮ್ಮ ಕಂಪನಿಯ ಒಂದು ಯೂನಿಟ್‌ನ ವಿಳಾಸ 22ಬಿ ದೊಡ್ಡೆನಕುಂಡಿ 2ನೇ ಪೇಸ್, ಇಂಡಸ್ಟ್ರೀಯಲ್ ಏರಿಯಾ, ವೈಟ್‌ಪೀಲ್ಡ್ ರಸ್ತೆ, ಬೆಂಗಳೂರು ಇರುತ್ತದೆಂದರೆ ಸರಿ. ನಮ್ಮ ಕಂಪನಿಯ ಇನ್ನೊಂದು ಯೂನಿಟ್‌ನ ವಿಳಾಸ 186ಃ3, ಹೂಡಿ, ಕೆಆರ್‌ಪುರಂ ಹೋಬಳಿ, ಬೆಂಗಳೂರುಸೌತ್ ತಾಲ್ಲೂಕು, ಬೆಂಗಳೂರು ಇರುತ್ತದೆಂದರೆ ಸರಿ. 2016ರಲ್ಲಿ ನನ್ನ ಹಾಗೂ

ಆರೋಪಿಯವರ ನಡುವೆ ಯಾವುದೇ ಹಣಕಾಸಿನ ವ್ಯವಹಾರವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

17ನೇ ಅಪರ ನ್ಯಾಯಾಧೀಶರು